ಅಸ್ಮಿತೆ ಜಾಗರಣೆಯಿಂದ ಲೋಕಹಿತದ ಮುಖ ಚಿಂತನೆಯಿಂದ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಪುರುಷರ ಹಾಕಿಯಲ್ಲಿ ಜರ್ಮನಿಯನ್ನು ಸೋಲಿಸಿ ಕಂಚಿನ ಪದಕ ಗೆದ್ದು ಸಂಭ್ರಮಿಸುತ್ತಿರುವ ಭಾರತದ ಹಾಕಿ ತಂಡ. 41 ವರ್ಷಗಳ ಬಳಿಕ ಭಾರತ ಹಾಕಿಯಲ್ಲಿ ಪದಕ ಗೆದ್ದಿರುವುದು ಭಾರತೀಯರ ಹೆಮ್ಮೆಯನ್ನು ಹೆಚ್ಚಿಸಿದೆ.

ಸಂಪುಟ : 42 ಸಂಚಿಕೆ : 25 ಪ್ಲವ – ಶ್ರಾವಣ ಕಲಿಯುಗಾಬ್ದ 5123 15-08-2021 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4




## ಸ್ವರಾಜ್ಯ–75: ಎರಡು ಸಾವಿರ ವರ್ಷಗಳ ಸ್ವಾತಂತ್ರ್ಯ ಹೋರಾಟವನ್ನು ಸ್ಮರಿಸುವ ಸಂದರ್ಭ

ನಮ್ಮ ಸ್ವರಾಜ್ಯಕ್ಕೆ ಈಗ 75 ರ ಹರೆಯ. ಈ ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆ 75 ನೆಯದ್ದು. ದೇಶಾದ್ಯಂತ ಮುಂದಿನ ಒಂದು ವರ್ಷಗಳ ಕಾಲ ಇದರ ಸಡಗರ ಸಂಭ್ರಮದ ಆಚರಣೆಯ ಕಾರ್ಯಕ್ರಮಗಳು ನಡೆಯಲಿವೆ. ಈ ಸಂದರ್ಭದಲ್ಲಿ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ ಮಹಾಪುರುಷರನ್ನು ನೆನೆಯಬೇಕಾದ್ದು ನಮ್ಮ ಕರ್ತವ್ಯ. ಹಾಗೆಯೆ, ಈಗ ಇರುವ ಸ್ವಾತಂತ್ರ್ಯ ಕಳೆದು ಹೋಗದ ಹಾಗೆ ಜವಾಬ್ದಾರಿಯಿಂದ ವರ್ತಿಸುವುದೂ ಅಷ್ಟೇ ಮುಖ್ಯ.

ನಮ್ಮ ಸ್ವಾತಂತ್ರ್ಯ ಹೋರಾಟ ಕೇವಲ 200 ವರ್ಷದ್ದಲ್ಲ. ಅದು ಬ್ರಿಟಿಷರ ವಿರುದ್ಧ ಮಾತ್ರ ನಡೆದಿದ್ದಲ್ಲ. ನಮ್ಮ ಪಠ್ಯ ಪುಸ್ತಕಗಳಲ್ಲಿ ಸ್ವಾತಂತ್ರ್ಯ ಹೋರಾಟ ಎನ್ನುವಾಗ ಕೇವಲ 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ ಆರಂಭವಾಗುವುದಾದರೂ ಅದು ಬ್ರಿಟಿಷರ ವಿರುದ್ಧ ನಡೆದ ಹೋರಾಟ ಮಾತ್ರ. ಅದಕ್ಕೂ ಹಿಂದೆ ನಮ್ಮ ದೇಶಕ್ಕೆ ವಿದೇಶಿ ಆಕ್ರಮಣಕಾರರು ದಾಳಿ ಮಾಡಿರಲಿಲ್ಲವೇ? ಅವರ ವಿರುದ್ಧವೂ ಹೋರಾಟ ನಡೆದಿತ್ತಲ್ಲವೇ? ಆ ಹೋರಾಟಗಳು ನಡೆದಿದ್ದು ಯಾಕೆ? ಕಳೆದು ಹೋದ ನಮ್ಮ ಸ್ವಾತಂತ್ರ್ಯವನ್ನು ಪುನಃ ಗಳಿಸುವುದಕ್ಕಾಗಿಯೇ ನಡೆದ ಹೋರಾಟಗಳು ಅವು.

ಕ್ರಿಸ್ತಪೂರ್ವ ಆರನೆಯ ಶತಮಾನದಲ್ಲಿಯೇ ವಿದೇಶೀಯರ ಆಕ್ರಮಣ ಶುರುವಾಗಿತ್ತು. ಪರ್ಷಿಯನ್ನರು, ಗ್ರೀಕರು, ಶಕರು, ಹೂಣರು ಮೊದಲ್ಗೊಂಡವರು ಆಕ್ರಮಣ ಮಾಡಿದ್ದರು ನಮ್ಮ ದೇಶ ಮೇಲೆ. ಆದರೆ, ಅವರನ್ನೆಲ್ಲ ಜಯಿಸಿ ಪುನಃ ತಮ್ಮ ರಾಜ್ಯ ಸ್ಥಾಪನೆ ಮಾಡಿದ್ದರು ಭಾರತೀಯ ರಾಜರು. ಬಳಿಕ ಅರಬ್ ದೇಶಗಳ ಮುಸ್ಲಿಂ ರಾಜರ ಆಕ್ರಮಣ ಪ್ರಾರಂಭವಾಯಿತು. ದಾಹಿರನ ಸೋಲಿನಿಂದ ಮೊದಲ್ಗೊಂಡ ಈ ಆಕ್ರಮಣ ಅನೇಕ ಶತಮಾನಗಳ ಕಾಲ ಮುಂದುವರಿಯಿತು. ಈಗಿನ ಅಫ್ಘಾನ್ ಕೂಡ ಭಾರತದ ಭಾಗವಾಗಿಯೇ ಇತ್ತಷ್ಟೇ. ಕ್ರಿ. ಶ. 637 ರಲ್ಲಿ ಅರಬರ ಆಕ್ರಮಣ ಪ್ರಾರಂಭಧವರೂ ಅವರು ದೆಹಲಿ ತಲುಪಿದ್ದು ಕ್ರಿ. ಶ. 1100 ರಲ್ಲಿ. ಅಂದರೆ, ಅಲ್ಲಿಯವರೆಗೂ ಭಾರತದ ರಾಜರು ಅವರ ಪ್ರತಿ ಧಾಳಿಯನ್ನೂ ಹಿಮ್ಮೆಟ್ಟಿಸಿದ್ದರು ಎಂಬುದು ಅರಿವಾಗುತ್ತದೆ. ಕೊನೆಗೆ ಬಾಬರ್ ನಿಂದ ಪ್ರಾರಂಭವಾದ ಮೊಗಲರ ಆಡಳಿತ ಕೆಲವು ಶತಮಾನಗಳ ಕಾಲ ನಡೆಯಿತಾದರೂ, ಸಂಪೂರ್ಣ ಭಾರತ ಯಾವತ್ತೂ ಅವರ ಅಧೀನಕ್ಕೆ ಬಂದದ್ದಿಲ್ಲ. ಒಂದು ಪ್ರದೇಶ ಅವರ ವಶವಾಗುವ ಹೊತ್ತಿಗೆ ಇನ್ನೊಂದು ಅವರ ಕೈಬಿಟ್ಟು ಪುನಃ ಭಾರತೀಯ ರಾಜ ಕೈಸೇರುತ್ತಿತ್ತು. 'ಈ ಶಿವಾಜಿ ಒಬ್ಬ ಇಲ್ಲದಿದ್ದರೆ, ಇಷ್ಟು ಹೊತ್ತಿಗೆ ನಾನು ಸಂಪೂರ್ಣ ಭಾರತಕ್ಕೆ ಸಾಮ್ರಾಟನಾಗಿರುತ್ತಿದ್ದೆ' ಎಂಬ ಔರಂಗಜೇಬನ ಹೇಳಿಕೆ ನೋಡಿದರೆ, ಅವರಿಗೆಭಾರತೀಯ ರಾಜರ ಪ್ರತಿರೋಧ ಎಷ್ಟಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಶಿವಾಜಿಯ ಹಿಂದವೀ ಸಾಮ್ರಾಜ್ಯ ಭಾರತದ ಹೆಚ್ಚಿನ ಭಾಗವನ್ನು ತನ್ನ ವಶಕ್ಕೆ ತೆಗೆದುಕೊಂಡಿತ್ತಷ್ಟೆ. ಅದಕ್ಕೂ ಮೊದಲಿನ ಮೂರು ಶತಮಾನಗಳ ಕಾಲ ವಿಜಯನಗರ ಸಾಮ್ರಾಜ್ಯ ಭಾರತದ ಬಹುಭಾಗವನ್ನು ಆಳಿತ್ತು. ರಜಪೂತ ರಾಜರೂ ಅಷ್ಟೇ ಪ್ರತಿರೋಧ ತೋರಿದ್ದರು. ಎರಡು ಸಾವಿರ ವರ್ಷ ಕಳೆದರೂ ಸ್ವಾತಂತ್ರ್ಯ ಪಡೆಯಬೇಕೆಂಬ ಕೆಚ್ಚು ಮಾತ್ರ ಭಾರತೀಯರಲ್ಲಿ ಕಡಿಮೆಯಾಗಲೇ ಇಲ್ಲ.

ಜಗತ್ತಿನ ಅನೇಕ ನಾಗರಿಕತೆಗಳು ಒಂದು ಶತಮಾನಗಳ ಕಾಲ ಕೂಡ ವಿದೇಶೀ ಆಕ್ರಮಣಗಳನ್ನು ತಡೆಯಲಾರದೇ ಸಂಪೂರ್ಣ ನಾಶವಾಗಿವೆ. ಅದು ಗ್ರೀಕ್, ರೋಮನ್, ಪರ್ಷಿಯನ್, ಮೆಸಪಟೋಮಿಯನ್ ಅಥವಾ ಇನ್ನಾವುದೇ ನಾಗರಿಕತೆ ಇರಬಹುದು. ಇಂದು ಅವು ಯಾವುವೂ ಇಲ್ಲ. ಆದರೆ, ಭಾರತದ ನಾಗರಿಕತೆ ಮಾತ್ರ ಈ ಎಲ್ಲ ಆಕ್ರಮಣಗಳನ್ನು ಸತತವಾಗಿ ಎದುರಿಸಿ ಇಂದು ಸ್ವತಂತ್ರವಾಗಿ ತಲೆ ಎತ್ತಿ ನಿಂತಿದೆ. ಅಂತಹ ಶೌರ್ಯ ಪರಂಪರೆ ನಮ್ಮದು. ಅದೇ ಪರಂಪರೆಯ ಭಾಗವಾಗಿ ಬಂದವರು ಸಂಗೊಳ್ಳಿ ರಾಯಣ್ಣ, ಕಿತ್ತೂರು ಚನ್ನಮ್ಮ, ರಾಣಿ ಅಬ್ಬಕ್ಕ, ಸಾವರ್ಕರ್, ಸುಭಾಶ್ಚಂದ್ರ ಬೋಸ್, ರಾಸ್ ಬಿಹಾರಿ ಬೋಸ್, ಭಗತ್ ಸಿಂಗ್, ಅಜಾದ್, ಧಿಂಗ್ರಾ ಮೊದಲಾದ ಸ್ವಾತಂತ್ರ್ಯ ಹೋರಾಟಗಾರರು. ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ವಿಕ್ರಂ ಬಾತ್ರಾ, ಯೋಗೇಂದ್ರ ಯಾದವ್, ಸೌರವ್ ಕಾಲಿಯಾ ಮೊದಲಾದವರ ಶೌರ್ಯ ಬಲಿದಾನಗಳೂ ಈ ಪರಂಪರೆಯನ್ನೇ ನೆನಪಿಸುತ್ತವೆ.

ಅಷ್ಟೇ ಅಲ್ಲ, ಸ್ವಾತಂತ್ರ್ಯ ಹೋರಾಟ ಎನ್ನುವುದು ಎಲ್ಲೋ ದೆಹಲಿಯಲ್ಲಿ ಮಾತ್ರ ನಡೆದಿದ್ದಲ್ಲ. ದೇಶದ ಎಲ್ಲ ಗ್ರಾಮ ನಗರಗಳಲ್ಲಿ ನಡೆದಿದೆ. ಅಂತಹ ಎಷ್ಟೋ ಬೆಳಕಿಗೆ ಬಾರದ ಸಾಹಸಗಾಥೆಗಳಿವೆ. ಅವುಗಳನ್ನೆಲ್ಲ ಹುಡುಕಿ ತೆಗೆದು ಹೆಚ್ಚು ಜನರಿಗೆ ತಿಳಿಸುವಂತೆ ಮಾಡುವುದು ಬಹಳ ಮುಖ್ಯ. ಇದರಿಂದ ನಮ್ಮ ಮುಂದಿನ ತಲೆಮಾರಿಗೆ ಪ್ರೇರಣೆ ದೊರೆಯುವುದರಲ್ಲಿ, ಅವರ ಸ್ವಾಭಿಮಾನ, ದೇಶಾಭಿಮಾನ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.

ಮಹರ್ಷಿ ಅರವಿಂದರು, ತಿಲಕರು, ಗಾಂಧೀಜಿ, ಠಾಗೋರರು, ಬಂಕಿಮರ ಮೊದಲಾದವಾರ ಕನಸಿನ ಭಾರತವೆಂದರೆ ಅದು ಭಾರತೀಯ ವಿಚಾರಗಳ ಆಧಾರ ಮೇಲೆ ನಿರ್ಮಾಣವಾದದ್ದು, ಅದು ಪಶ್ಚಿಮದ ನಕಲಲ್ಲ. ಸ್ವಾತಂತ್ರ್ಯ ಬಂದು 75 ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ನಮ್ಮದೇ ವಿಚಾರದ ಆಧಾರದ ಮೇಲೆ ನಮ್ಮ ದೇಶವನ್ನು ಕಟ್ಟುವ ಕೆಲಸದಲ್ಲಿ ನಾವೆಷ್ಟು ಪ್ರಗತಿ ಸಾಧಿಸಿದ್ದೇವೆ ಎಂದು ವಿಮರ್ಶಿಸಬೇಕಾಗಿದೆ. ಹಲವು ಕ್ಷೇತ್ರಗಳಲ್ಲಿ ಆಗಬೇಕಾದ ಅಂತಹ ಬದಲಾವಣೆಗಳನ್ನು ತರುವ ಜವಾಬ್ದಾರಿಯೂ ನಮ್ಮ ಮೇಲಿದೆ. ಈ ಹಿನ್ನೆಲೆಯಲ್ಲಿ ಸ್ವರಾಜ್ಯ–75 ನಮಗೆ ಬಹಳ ಮಹತ್ವದ್ದು.

## ಕೊರೋನಾ ಮೂರನೆಯ ಅಲೆ: ಭಯ ಬೇಡ, ಜಾಗ್ರತೆ ಇರಲಿ

ದೇಶಾದ್ಯಂತ ಪ್ರಸ್ತುತ ಕೊರೋನಾ ರೋಗಿಗಳ ಸಂಖ್ಯೆ ನಿಯಂತ್ರಣದಲ್ಲಿದ್ದು, ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ಮಾತ್ರ ಸ್ವಲ್ಪ ಏರುಗತಿಯಲ್ಲಿದೆ. ಇದನ್ನು ಹೊರತುಪಡಿಸಿದರೆ ದೇಶದೆಲ್ಲೆಡೆ ಜನಜೀವನ ಸಹಜಸ್ಥಿತಿಗೆ ಬಂದಿದೆ. ಹಾಗೆಯೇ, ಎಲ್ಲೆಡೆ ಲಸಿಕೆ ಹಾಕುವ ಪ್ರಕ್ರಿಯೆಯೂ ಚುರುಕಾಗಿ ನಡೆಯುತ್ತಿದೆ. ಇತ್ತೀಚೆಗೆ ನಡೆಸಿದ ಸಮೀಕ್ಷೆಯ ಪ್ರಕಾರ ದೇಶಾದ್ಯಂತ ವಯಸ್ಕರಲ್ಲಿ ಶೇ. 60 ಕ್ಕೂ ಹೆಚ್ಚು ಜನರಿಗೆ ರೋಗ ನಿರೋಧಕ ಶಕ್ತಿ ಬಂದಿದೆ ಎಂದು ಕಂಡುಬಂದಿದೆ.

ಕೊರೋನಾ ಮೂರನೇ ಅಲೆಯನ್ನು ಎದುರಿಸಲು ಸಿದ್ಧರಾಗೋಣ



ಯುರೋಪಿನ ಕೆಲವು ದೇಶಗಳಲ್ಲಿ, ಅಮೆರಿಕಾ ಹಾಗೂ ಜಪಾನ್ ದೇಶಗಳಲ್ಲೂ ಮೂರನೆಯ ಅಲೆ ಪ್ರಾರಂಭವಾಗಿದ್ದು, ಭಾರತದಲ್ಲೂ ಬರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ ಎಂದು ತಜ್ಞರು ಎಚ್ಚರಿಸಿದ್ದಾರೆ. ಹಾಗಾಗಿ ಎಲ್ಲರೂ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ. ಈ ದೃಷ್ಟಿಯಿಂದ ಮನೆಯಲ್ಲಿ ಎಲ್ಲರೂ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಕೆಲವು ಮಾಹಿತಿ ಇಲ್ಲಿದೆ.

1. ಲಸಿಕೆ ಹಾಕಿಸಿಕೊಳ್ಳದಿದ್ದರೆ, ತಕ್ಷಣವೇ ಲಸಿಕೆ ಹಾಕಿಸಿಕೊಳ್ಳುವುದು ಬಹಳ ಪ್ರಮುಖ ಹಾಗೂ ಮೊದಲನೆಯ ಹೆಜ್ಜೆ
2. ಆದಷ್ಟು ಹೆಚ್ಚು ಜನ ಸೇರುವ ಜಾಗಗಳಿಗೆ ಹೋಗದೇ ಇರುವುದು
3. ಹೊರಗಡೆ ಹೋಗುವಾಗ ತಪ್ಪದೆ ಮಾಸ್ಕ್ ಧರಿಸುವುದು. ಲಸಿಕೆ ಹಾಕಿಸಿಕೊಂಡವರೂ ಮಾಸ್ಕ್ ಧರಿಸುವುದು ಕಡ್ಡಾಯ.
4. ಲಸಿಕೆ ಹಾಕಿಸಿಕೊಂಡರೆ ಕೊರೋನಾ ಸಾಂಕ್ರಾಮಿಕ ತಗುಲುವುದಿಲ್ಲ ಎಂದು ಅರ್ಥವಲ್ಲ. ಒಂದು ವೇಳೆ ರೋಗ ಬಂದರೂ ಅದು ಉಲ್ಬಣವಾಗುವುದಿಲ್ಲ. ಏಕೆಂದರೆ, ಶರೀರದಲ್ಲಿರುವ ಪ್ರತಿಕಾಯಗಳು ವೈರಸ್ ವಿರುದ್ಧ ಹೋರಾಡಿ ಅದು ಹರಡದಂತೆ ತಡೆಯುತ್ತವೆ. ಹಾಗಾಗಿ ಲಸಿಕೆ ಹಾಕಿಸಿಕೊಂಡವರಲ್ಲಿ ವೈರಸ್ ಇದ್ದರೆ ಅವರು ಅಸಿಂಪ್ಟಮ್ಯಾಟಿಕ್ (ಯಾವುದೇ ರೋಗಲಕ್ಷಣಗಳಿಲ್ಲದ ರೋಗಿ) ಆಗಿರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹಾಗಾಗಿ, ಹೆಚ್ಚು ಜನಸಂದಣಿಇರುವ ಕಡೆ ಸಾಧ್ಯವಾದಷ್ಟು ಹೋಗದಿರುವುದು ಹಾಗೂ ಮನೆಯಿಂದ ಹೊರಗೆ ಹೋಗುವಾಗ ಮಾಸ್ಕ್ ಧರಿಸುವುದು ಅಗತ್ಯ.
5. ಹೊರಗಿನಿಂದ ಬಂದಾಗ ಕಡ್ಡಾಯವಾಗಿ ಮುಖ ಕೈಕಾಲು ತೊಳೆದು ಒಳಗೆ ಬರುವುದು. ಬಟ್ಟೆಯನ್ನು ಬದಲಿಸಿ, ತೆಗೆದ ಬಟ್ಟೆಯನ್ನು ತೊಳೆಯುವುದು.

### ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ

ಮಕ್ಕಳ ರೋಗನಿರೋಧಕ ಶಕ್ತಿ ಚೆನ್ನಾಗಿರುವಂತೆ ನೋಡಿಕೊಂಡರೆ, ಹೆಚ್ಚಿನ ಸಮಸ್ಯೆಯಾಗದು.

- ಮಕ್ಕಳಿಗೆ ಪೌಷ್ಟಿಕ ಭೋಜನ ಸಿಗುವಂತೆ ಮಾಡುವುದು
- ನುಗ್ಗೆ ಸೊಪ್ಪಿನಂತಹ ಸತ್ವಯುತ ಆಹಾರ ಬಳಕೆ
- ಹಣ್ಣು, ತರಕಾರಿಗಳ ಬಳಕೆ
- ಹೆಚ್ಚು ಸಕ್ಕರೆ ಹಾಗೂ ಉಪ್ಪು ಇರುವ ಆಹಾರ ಬೇಡ

1ನೇ ಪುಟದಿಂದ...

- ನಿಂಬೆ ಹಣ್ಣಿನ ಪಾನಕ, ಎಳನೀರು, ಹಾಲು, ಪುದಿನ, ತುಳಸಿ ಎಲೆ ಬಳಕೆ ಒಳ್ಳೆಯದು
- 5 ವರ್ಷ ಮೇಲ್ಪಟ್ಟ ಮಕ್ಕಳಿಗೆ ಯೋಗಾಸನ, ಪ್ರಾಣಾಯಾಮ ಮಾಡುವ ಅಭ್ಯಾಸ ಮಾಡಿಸುವುದು ಒಳ್ಳೆಯದು
- ಚಿಕ್ಕ ಮಕ್ಕಳಿಗೆ ಮಾಸ್ಕ್ ಹಾಕಿಕೊಳ್ಳುವುದನ್ನು ಹೇಳಿಕೊಡುವುದು

## ಮನೆಯ ಎಲ್ಲರೂ ಪಾಲಿಸಬಹುದಾದ ಸಂಗತಿಗಳು

- ಶುದ್ಧ ಹಾಗೂ ಕಾಯಿಸಿ ಆರಿಸಿದ ನೀರನ್ನು ಕುಡಿಯಲು ಬಳಸುವುದು
- ತುಳಸಿ, ಶುಂಠಿ, ಕಾಳು ಮೆಣಸು, ದಾಲ್ಚಿನಿ, ಅಮೃತ ಬಳ್ಳಿಯ ಕಷಾಯವನ್ನು ದಿನಕ್ಕೊಮ್ಮೆ ಕುಡಿಯುವುದು
- ರೋಗ ನಿರೋಧಕತೆ ಹೆಚ್ಚಿಸಿಕೊಳ್ಳಲು ಕಡಲೆ ಕಾಳು, ಹೆಸರು ಕಾಳುಗಳನ್ನು ಮೊಳಕೆ ಬರಿಸಿ ಪ್ರತಿ ವ್ಯಕ್ತಿ 50ಗ್ರಾಮ್ ನಷ್ಟು ಸೇವಿಸುವುದು. ಸ್ವಲ್ಪ ಬೆಲ್ಲವನ್ನು ಪ್ರತೀ ದಿನ ಸೇವಿಸುವುದು.

ಶೀತ ಕೆಮ್ಮು ಕಾಣಿಸಿಕೊಂಡರೆ ತಕ್ಷಣವೇ ಮನೆಯಲ್ಲೇ ಮಾಡಬಹುದಾದ ಕೆಲವು ಮನೆ ಮದ್ದುಗಳನ್ನು ಇಲ್ಲಿ ಕೊಟ್ಟಿದೆ.

## ಶೀತ ಮತ್ತು ಸೀನು

- ಒಂದು ಚಮಚ ಓಮ ಹಾಗೂ ಒಂದು ಕರ್ಪೂರದ ತುಂಡನ್ನು ಪುಡಿ ಮಾಡಿ ಒಂದು ಬಟ್ಟೆಯಲ್ಲಿ ಹಾಕಿ ಆಗಾಗ ಮುಸುತ್ತಿದ್ದರೆ, ಉಪಶಮನ ಸಾಧ್ಯ.
- ಮೂಗಿಗೆ ಹಸುವಿನ ತುಪ್ಪ, ಸಾಸಿವೆ ಎಣ್ಣೆ ಅಥವಾ ಅಣು ತೈಲದ ಒಂದೆರಡು ಹನಿ ಹಾಕುವುದು

## ಒಣ ಕೆಮ್ಮು

- 15 ಮಿ. ಲೀ. ಆಡುಸೋಗೆಯ ಎಲೆಗಳ ತಾಜಾ ರಸಕ್ಕೆ ಸಕ್ಕರೆ ಸೇರಿಸಿ ಸೇವಿಸಬೇಕು
- ಅರ್ಧ ಚಮಚ ಸೀತೋಪಲಾದಿ ಚೂರ್ಣವನ್ನು ಅರ್ಧ ಚಮಚ ಜೇನುತುಪ್ಪದೊಂದಿಗೆ ಬೆರೆಸಿ ಸೇವಿಸುವುದು
- ತುಳಸಿ ಎಲೆಯ ರಸವನ್ನು ಅರ್ಧ ಚಮಚ ಜೇನುತುಪ್ಪದೊಂದಿಗೆ ಬೆರೆಸಿ ಸೇವಿಸುವುದು

## ಕಫಯುಕ್ತ ಕೆಮ್ಮು

- ಅರ್ಧ ಚಮಚ ತುಳಸಿ ಎಲೆಗಳ ರಸಕ್ಕೆ ಅಷ್ಟೇ ಪ್ರಮಾಣದಲ್ಲಿ ಜೇನುತುಪ್ಪವನ್ನು ಬೆರೆಸಿ ಸೇವಿಸಬೇಕು
- 14 ಮಿ. ಲೀ . ಅಗಸೆ ಸೊಪ್ಪಿನ ರಸಕ್ಕೆ ಅಷ್ಟೇ ಪ್ರಮಾಣದಲ್ಲಿ ಜೇನುತುಪ್ಪವನ್ನು ಬೆರೆಸಿ ಸೇವಿಸಬೇಕು
- ತ್ರಿಕೂಟಚೂರ್ಣ, ಕಾಳು ಮೆಣಸಿನ ಪುಡಿ ಮತ್ತು ಅರಳಿ ಎಲೆಯ ಚೂರ್ಣವನ್ನು ಸಮ ಪ್ರಮಾಣದಲ್ಲಿ ಜೇನುತುಪ್ಪವನ್ನು ಬೆರೆಸಿ ಸೇವಿಸಬೇಕು

## ಗಂಟಲು ನೋವು

- ದಿನಕ್ಕೆ ಮೂರ್ನಾಲ್ಕು ಬಾರಿ ಜೇಷ್ಠಮಧುವನ್ನು ಚೀಪಬೇಕು
- ಬಿಸಿನೀರಿಗೆ ಉಪ್ಪನ್ನು ಬೆರೆಸಿ ಬಾಯಿ ಹಾಗೂ ಗಂಟಲು ಮುಕ್ಕಳಿಸುವುದು

ನಮ್ಮ ಮನೆಯಲ್ಲಿ ಅಥವಾ ನಮ್ಮ ಸುತ್ತಮುತ್ತ ಯಾರಿಗಾದರೂ ರೋಗ ಲಕ್ಷಣ ಕಂಡಲ್ಲಿ ಪ್ರಾಥಮಿಕ ಔಷಧೋಪಚಾರ ಮಾಡಿದ ತಕ್ಷಣ ಹತ್ತಿರದ ವೈದ್ಯರನ್ನು ಸಂಪರ್ಕಿಸುವುದು ಸೂಕ್ತ. ಹಾಗೂ ತಕ್ಷಣದಿಂದಲೇ ರೋಗಿಯು ಪ್ರತ್ಯೇಕವಾಗಿರುವಂತೆ ಗಮನಿಸಿದರೆ, ಇತರರಿಗೆ ಹರಡುವುದನ್ನು ತಪ್ಪಿಸಬಹುದು. ಆಸ್ಪತ್ರೆಗೆ ಸೇರಬೇಕಾದ ಅಗತ್ಯವಿಲ್ಲದ, ಅಂದರೆ ಗಂಭೀರ ರೋಗ ಲಕ್ಷಣಗಳಿಲ್ಲದ ರೋಗಿಗಳೂ ದಿನಕ್ಕೆ ಮೂರೂ ಬಾರಿ ಆಕ್ಸಿಜನ್ ಮಟ್ಟವನ್ನು ಪರೀಕ್ಷಿಸಿಕೊಳ್ಳುತ್ತಿರಬೇಕು. 94% ಕ್ಕಿಂತ ಹೆಚ್ಚಿದ್ದರೆ ಅದು ಅಪಾಯವಿಲ್ಲ. 90% ದಿಂದ 94% ವರೆಗೆ ಇದ್ದಾರೆ ಹೆಚ್ಚಿನ ಗಮನ ಅಗತ್ಯ. 90% ಕ್ಕಿಂತ ಕೆಳಗೆ ಬಂದರೆ ಆಸ್ಪತ್ರೆಯನ್ನು ಸಂಪರ್ಕಿಸಬೇಕು. ಅಂತಹವರಿಗೆ ಆಕ್ಸಿಜನ್ ವ್ಯವಸ್ಥೆ ಮಾಡಬೇಕಾಗಬಹುದು.

ಒಟ್ಟಿನಲ್ಲಿ, ಮೂರನೆಯ ಅಲೆ ಬಂದರೂ, ನಾವು ಜಾಗೃತರಾಗಿದ್ದರೆ, ಅದನ್ನು ಎದುರಿಸುತ್ತೇವೆಂಬ ಸಂಕಲ್ಪ ನಮ್ಮಲ್ಲಿದ್ದರೆ, ಅದರ ಪರಿಣಾಮ ಹೆಚ್ಚೇನೂ ಆಗದಂತೆ ತಡೆಯಬಹುದು. ಅಂತಹ ಜವಾಬ್ದಾರಿಯುತ ನಾಗರಿಕರಾಗಿ, ನಾವೆಲ್ಲಾ ಒಟ್ಟಾಗಿ ಬರಬಹುದಾದ ಸವಾಲನ್ನು ಎದುರಿಸೋಣ.

## ಸಂಸ್ಮರಣೆ | ರಾಮಚಂದ್ರ ದತ್ತಾತ್ರೇಯ ರಾನಡೆ (03.07.1886 – 06.06.1957)



ಆರ್. ಡಿ. ರಾನಡೆ ಅವರು ತತ್ತ್ವ ಜ್ಞಾನಿಗಳಾಗಿ ಪ್ರಸಿದ್ಧರು. ಇವರ ಪೂರ್ಣ ಹೆಸರು ರಾಮಚಂದ್ರ ದತ್ತಾತ್ರೇಯ ರಾನಡೆ. ತಮ್ಮ ನಿಕಟವರ್ತಿಗಳಲ್ಲಿ ಮತ್ತು ಶಿಷ್ಯವೃಂದದಲ್ಲಿ ಇವರು ಗುರುದೇವ ಎಂದು ಖ್ಯಾತರಾಗಿದ್ದರು. ಶಿಕ್ಷಣದಲ್ಲಿ ಅತ್ಯುಚ್ಚ ಪದವಿಯನ್ನು ಗಳಿಸಿ, ತತ್ತ್ವಜ್ಞಾನದ ಪ್ರಾಧ್ಯಾಪಕರಾಗಿ, ವಿಶ್ವವಿದ್ಯಾಲಯದ ಉಪಕುಲಪತಿಯಾದರೂ ಆಧ್ಯಾತ್ಮಿಕ ಸಾಧನೆಯನ್ನು ಅತ್ಯಂತ ದೃಢತೆಯಿಂದ ಮಾಡಿ ಸಮಾಜಕ್ಕೆ ಪರಮಾರ್ಥದ ಮಾರ್ಗದರ್ಶನ ನೀಡಿದ ಶ್ರೇಯಸ್ಸು ಗುರುದೇವ ರಾನಡೆ ಇವರಿಗೆ ಸಲ್ಲುತ್ತದೆ. ಗುಡಿಸಲಿನಿಂದ ರಾಷ್ಟ್ರಪತಿ ಭವನದವರೆಗೆ ರಾನಡೆಯವರು ಭಾರತದ ಸಂತರ ಜೀವನದ ಪರಿಮಳವನ್ನು ಹಬ್ಬಿಸಿದರು. ಡಾ. ರಾಜೇಂದ್ರಪ್ರಸಾದರು ಭಾರತದ ರಾಷ್ಟ್ರಪತಿಗಳಾಗಿದ್ದಾಗ 1954ರಲ್ಲಿ ರಾಷ್ಟ್ರಪತಿ ಭವನದಲ್ಲಿ ರಾನಡೆಯವರು ಎರಡು ಉಪನ್ಯಾಸಗಳನ್ನು ಮಾಡಿದರು.

ರಾನಡೆ 1886ರ ಜುಲೈ 3ರಂದು ಜಮಖಂಡಿಯಲ್ಲಿ ಹುಟ್ಟಿದರು. ಕುಶಾಗ್ರಮತಿಗಳಾಗಿದ್ದ ಇವರು ಗಣಿತಶಾಸ್ತ್ರದಲ್ಲಿ ಬಿ.ಎ.(1907) ಮತ್ತು ತತ್ತ್ವಶಾಸ್ತ್ರದಲ್ಲಿ ಎಂ.ಎ.(1914) ಪದವಿ ಪಡೆದರು. ಇವರಿಗೆ ಗ್ರೀಕ್ ಹಾಗೂ ಸಂಸ್ಕೃತ ಭಾಷೆಗಳ ಮೇಲೆ ಅಸಾಧಾರಣ ಪ್ರಭುತ್ವವಿತ್ತು. ರಾನಡೆ 1914–24ರ ಅವಧಿಯಲ್ಲಿ ಡೆಕ್ಕನ್ ಎಜುಕೇಷನ್ ಸಂಸ್ಥೆಯ ಫರ್ಗ್ಯೂಸನ್ ಹಾಗೂ ವಿಲ್ಲಿಂಗ್ಟನ್ ವಿದ್ಯಾಲಯಗಳಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅನಂತರ ತೀವ್ರ ಅನಾರೋಗ್ಯದ ಕಾರಣದಿಂದ ನೌಕರಿಯನ್ನು ಬಿಟ್ಟು ಬಿಜಾಪುರ ಜಿಲ್ಲೆಯ ನಿಂಬಾಳ ಎಂಬ ಹಳ್ಳಿಯಲ್ಲಿ ನೆಲೆಸಿದರು. ಮತ್ತೆ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿ (1927–45) ಅದೇ ವಿಶ್ವವಿದ್ಯಾಲಯದ ಉಪಕುಲಪತಿಯಾದರು (1945–46). ಅಲಹಾಬಾದ್ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್ ಪದವಿಯನ್ನು ನೀಡಿ ಗೌರವಿಸಿತು.

ರಾನಡೆಯವರು ಫರ್ಗ್ಯೂಸನ್‌ಕಾಲೇಜಿನಲ್ಲಿ ಕಲಿಸುತ್ತಿದ್ದಾಗ ಅವರಿಗೆ ಬೆಂಗಳೂರಿನಿಂದ ಉಪನಿಷತ್ತುಗಳನ್ನು ಕುರಿತು ಉಪನ್ಯಾಸಗಳನ್ನು ಮಾಡಲು ಕರೆ ಬಂತು. ಈ ಆಹ್ವಾನ ಬಂದಾಗ ರಾನಡೆಯವರಿಗೆ ಮೂವತ್ತು ವರ್ಷ ಸಹ ವಯಸ್ಸಾಗಿರಲಿಲ್ಲ. ಈ ಉಪನ್ಯಾಸಗಳು ಬೆಂಗಳೂರಿನ ಶಂಕರ ಮಠದಲ್ಲಿ ಆದವು. ಬರೋಡದ ಮಹಾರಾಜರಾದ ಸಯಾಜಿರಾವ್ ಗಾಯಕವಾಡರು ಅಧ್ಯಕ್ಷತೆ ವಹಿಸಿದ್ದರು. ರಾನಡೆಯವರ ಉಪನ್ಯಾಸಗಳನ್ನು ಗಾಯಕವಾಡರು ಬಹಳ ಮೆಚ್ಚಿಕೊಂಡರು. ಅವರು ಸೂಚಿಸಿದಂತೆ ನಿಂಬಾಳದಲ್ಲಿದ್ದು ರಾನಡೆಯವರು "ಉಪನಿಷತ್ತುಗಳ ತತ್ತ್ವಜ್ಞಾನದ ರಚನಾತ್ಮಕ ಸಮೀಕ್ಷೆ" ಎಂಬ ಗ್ರಂಥವನ್ನು ಬರೆದರು. ಈ ಗ್ರಂಥವು 1926ರಲ್ಲಿ ಪ್ರಕಟವಾಯಿತು. ಕೆಲವೇ ದಿನಗಳಲ್ಲಿ ರಾನಡೆಯವರ ಕೀರ್ತಿಸುಗಂಧವು ಎಲ್ಲೆಡೆ ಹಬ್ಬಿತು. ದೇಶವಿದೇಶದ ಅನೇಕ ವಿದ್ವಾಂಸರು ಈ ಉದ್ಗ್ರಂಥವನ್ನು ಬಹಳವಾಗಿ ಪ್ರಶಂಸೆ ಮಾಡಿದರು.

ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳಾಗಿದ್ದ ಪ್ರಸಿದ್ಧ ಸಂಸ್ಕೃತ ವಿದ್ವಾಂಸ ಗಂಗಾನಾಥ ಝಾ ಈ ಗ್ರಂಥವನ್ನು ಬಹಳ ಮೆಚ್ಚಿ ರಾನಡೆಯವರಿಗೆ ಅಲಹಾಬಾದ್‌ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಲು ಪ್ರಾರ್ಥಿಸಿದರು. ಅಲಹಾಬಾದ್ ವಿಶ್ವವಿದ್ಯಾಲಯದಿಂದ ನಿವೃತ್ತರಾದ ಮೇಲೆ ರಾನಡೆಯವರು "ಆಧ್ಯಾತ್ಮ ವಿದ್ಯಾ ಮಂದಿರ" ಎಂಬ ಸಂಸ್ಥೆ ಪ್ರಾರಂಭಿಸಿದರು ಮತ್ತು ಅದರ ಪರವಾಗಿ ಬೇರೆ ಬೇರೆ ಸ್ಥಾನಗಳಲ್ಲಿ ಅನೇಕ ಉಪನ್ಯಾಸಗಳನ್ನು ಕೊಟ್ಟರು. 1954 ರ ಏಪ್ರಿಲ್ ನಲ್ಲಿ ಎರಡು ಉಪನ್ಯಾಸಗಳು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಆದವು. ಆಗಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತು ಗಮನಾರ್ಹ: "ಪ್ರಾಧ್ಯಾಪಕ ರಾನಡೆಯವರು ವಿವಿಧ ಭಾರತೀಯ ಭಾಷೆಗಳ ಸಂತವಾಙ್ಮಯದ ಅಭ್ಯಾಸವನ್ನು ಅನೇಕ ವರ್ಷಗಳಿಂದ ಮಾಡಿದ್ದಾರೆ. ಪ್ರಾಚೀನ ಕಾಲದಿಂದ ಪರಂಪರಾಗತರಾಗಿ ಬಂದ ತತ್ತ್ವಜ್ಞಾನವು ಅವರಲ್ಲಿ ಮೂರ್ತಿವೆತ್ತಾಗಿ ನಿಂತಿದೆ."

ರಾಮಚಂದ್ರ ದತ್ತಾತ್ರೇಯ ರಾನಡೆ ಅವರಿಗೆ ಆಧ್ಯಾತ್ಮದ ಒಲವು ತಾಯಿ ಪಾರ್ವತಿದೇವಿ ಅವರಿಂದ ಬಂದ ಬಳುವಳಿಯಾಗಿತ್ತು. ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಇಂಚಗೇರಿಯ ಸಂಪ್ರದಾಯದ ಉಮದಿ ಭಾವುಸಾಹೇಬ ಎಂಬ ಗುರುಗಳಿಂದ ನಾಮದೀಕ್ಷೆಯನ್ನು ಪಡೆದು ನಿಷ್ಠೆಯಿಂದ ಸಾಧನೆಯನ್ನು ಮಾಡಿ ಆತ್ಮಸಾಕ್ಷಾತ್ಕಾರವನ್ನು ಪಡೆದರು. ರಾನಡೆ ಅವರ ತತ್ತ್ವದರ್ಶನ ಅದ್ವೈತ ಪರಂಪರೆಯದು. ಇವರ ದರ್ಶನವನ್ನು ಅನುಭಾವ ಮಾರ್ಗದ ಅದ್ವೈತ ಎಂದೂ, ಆನಂದವಾದ ಎಂದೂ, ಸಾಕ್ಷಾತ್ಕಾರವಾದ ಎಂದೂ ವಿಶ್ಲೇಷಿಸಲಾಗುತ್ತಿದೆ. ನೈತಿಕತೆ ಹಾಗೂ ನಾಮಸ್ಮರಣೆ ಇವು ಇವರ ಪ್ರಕಾರ ಸಾಕ್ಷಾತ್ಕಾರ ಮಾರ್ಗದಲ್ಲಿ ಮಹತ್ತ್ವದ ಅಂಗಗಳು. ರಾನಡೆಯವರ ಶಿಷ್ಯವೃಂದ ಅಪಾರ. ಜಾತಿ ಮತಗಳನ್ನು ಪರಿಗಣಿಸದೆ ಎಲ್ಲರನ್ನೂ ಸಮಾನ ಭಾವದಿಂದ ಕಾಣುತ್ತಿದ್ದ ಇವರು ಸಹಸ್ರಾರು ಜನರಿಗೆ ನಾಮದೀಕ್ಷೆಯನ್ನು ಕೊಟ್ಟಿದ್ದರು.

ಎ ಕನ್‌ಸ್ಟ್ರಕ್ಟಿವ್ ಸರ್ವೆ ಆಫ್ ಉಪನಿಷದಿಕ್ ಫಿಲಾಸಫಿ(1962), ಮಿಸ್ಟಿಸಿಸಂ ಇನ್ ಮಹಾರಾಷ್ಟ್ರ(1933), ಪಾಥ್ ವೇ ಟು ಗಾಡ್ ಇನ್ ಹಿಂದಿ ಲಿಟರೇಚರ್(1954), ದಿ ಭಗವದ್ಗೀತ ಆಸ್ ಎ ಫಿಲಾಸಫಿ ಆಫ್ ಗಾಡ್ ರಿಯಲೈಸೇಷನ್(1959), ಪಾಥ್ ವೇ ಟು ಗಾಡ್ ಇನ್ ಕನ್ನಡ ಲಿಟರೇಚರ್(1960), ವೇದಾಂತ ಆಸ್ ಎ ಕಲ್ಚರೇಷನ್ ಆಫ್ ಇಂಡಿಯನ್ ಫಿಲಾಸಫಿಕಲ್ ಥಾಟ್(1970) ಇವು ರಾಮಚಂದ್ರ ದತ್ತಾತ್ರೇಯ ರಾನಡೆ ಅವರ ಗ್ರಂಥಗಳು. ರಾಮಚಂದ್ರ ದತ್ತಾತ್ರೇಯ ರಾನಡೆ ಅವರು 1957ರ ಜೂನ್ 6ರಂದು ನಿಂಬಾಳದಲ್ಲಿ ನಿಧನರಾದರು.

## ಪುಸ್ತಕ ಪರಿಚಯ

ಪುಸ್ತಕದ ಹೆಸರು: **ವಿಶ್ವಸಂದೇಶ ಪೂರ್ವಕಾಂಡ, ವಿಶ್ವಸಂದೇಶ ಉತ್ತರಕಾಂಡ, ವಿಶ್ವಕಥಾಕುಂಜ**
ಸಂಪಾದಕರು: **ನಾರಾಯಣ ಭಟ್ ಟಿ., ರಾಮಕುಂಜ**
ಮೂರು ಪುಸ್ತಕಗಳ ಒಂದು ಸೆಟ್ ಬೆಲೆ: **ರೂ. 600**
ಒಟ್ಟು ಪುಟಗಳು: **828**
ಸಂಪರ್ಕ: **98457 66534**




ಉಡುಪಿ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರು ಪಂಡಿತರಿಂದ ಪಾಮರರವರೆಗೂ ಹೃನ್ಮನ ತಟ್ಟಿದವರು. ಶ್ರೀಗಳ ಸುಂದರ, ಚಿತ್ತಾಕರ್ಷಕ ಆಶೀರ್ವಚನ ಕೇಳದವರು ಯಾರೂ ಇಲ್ಲ. ಅವರದು ದೀರ್ಘ ಭಾಷಣವಲ್ಲ. ಸುಮಾರು ಹತ್ತು ನಿಮಿಷಗಳ ಆಶೀರ್ವಚನದಲ್ಲಿ ಸದಾ ಒಂದು ಕಥೆ ಇದ್ದೇ ಇರುತ್ತಿತ್ತು. ಅವುಗಳು ಪುರಾಣ, ರಾಮಾಯಣ, ಮಹಾಭಾರತದಲ್ಲಿ ಬರುವ ಕಥೆಗಳಾದರೂ ಸನ್ನಿವೇಶಕ್ಕೆ ತಕ್ಕಂತೆ ಸರಳವಾಗಿ ನಿರೂಪಿಸುತ್ತಿದ್ದ ಚಾತುರ್ಯ ಮಕ್ಕಳಿಂದ, ವಯೋವೃದ್ಧರವರೆಗೂ ಖುಷಿ ಕೊಡುತ್ತಿತ್ತು. ಮೌಲ್ಯಭರಿತ ಹಾಗೂ ನೀತಿಬೋಧಕವಾಗಿರುತ್ತಿತ್ತು.

ಶ್ರೀಗಳು ಪ್ರಾಥಮಿಕ ಶಿಕ್ಷಣ ಪಡೆದ, ಅವರದೇ ಆಡಳಿತೆಯ, ಶ್ರೀಗಳ ಹುಟ್ಟೂರು ರಾಮಕುಂಜ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ, ರಾಜ್ಯ–ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ, ಸಾಹಿತಿ ನಾರಾಯಣ ಭಟ್ ಇಂತಹ ಕಿರು ಸಂದೇಶದ ಕಥೆಗಳನ್ನು ಸಂಗ್ರಹಿಸಿ ಮೂರು ಕೃತಿಗಳಲ್ಲಿ ಸಮಾಜಕ್ಕೆ ಅರ್ಪಿಸಿದ್ದಾರೆ. ಶ್ರೀಗಳನ್ನು ತಿಳಿದವರಿಗೆ ಮಾತ್ರವಲ್ಲ, ಮೌಲ್ಯಯುತ ಕೃತಿಗಳ ಸಂಗ್ರಾಹಕರಿಗೆ, ಚಿಂತಕರಿಗೆ, ಶಿಕ್ಷಕರಿಗೆ, ರಾಷ್ಟ್ರಭಕ್ತರಿಗೆ ಇದು ಅತ್ಯಂತ ಹೃದಯ ತಟ್ಟುವ ಕೃತಿ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಸುನೀಲ್ ಕುಲಕರ್ಣಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ

ಒಡಿಶಾದ ಕರಾವಳಿಯ ಚಂಡಿಪುರದ ಪರೀಕ್ಷಾ ಕೇಂದ್ರದಲ್ಲಿ ಹೊಸ ತಲೆಮಾರಿನ ಆಕಾಶ್ ಎನ್‌ಜಿ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಡಿಆರ್‌ಡಿಒ ಮೂಲಗಳು ತಿಳಿಸಿವೆ. ಈ ಕ್ಷಿಪಣಿಯು ರೇಡಿಯೋ ಫ್ರೀಕ್ವೆನ್ಸಿ ಅನ್ವೇಷಕ ವ್ಯವಸ್ಥೆ ಹೊಂದಿದ್ದು, ಅತಿ ವೇಗದ ಮಾನವ ರಹಿತ ವಿಮಾನವನ್ನು ಹೊಡೆದುರುಳಿಸಿರುವುದಾಗಿ ಡಿಆರ್‌ಡಿಒ ಹೇಳಿದೆ. ಪರೀಕ್ಷೆ ಸಂದರ್ಭದಲ್ಲಿ ಕ್ಷಿಪಣಿಯು ವೇಗದ ಮತ್ತು ಚುರುಕಿನ ವೈಮಾನಿಕ ಬೆದರಿಕೆಗಳನ್ನು ತಟಸ್ಥಗೊಳಿಸಲು ಅಗತ್ಯವಾದ ಹೆಚ್ಚಿನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಇದು ಭಾರತೀಯ ವಾಯುಪಡೆಗೆ ಹೆಚ್ಚಿನ ಬಲ ತುಂಬುತ್ತದೆ ಎಂದು ಡಿಆರ್‌ಡಿಒ ಅಭಿಪ್ರಾಯ ವ್ಯಕ್ತಪಡಿಸಿದೆ.

ಗುಜರಾತ್‌ನ ವಿಶ್ವ ಹಿಂದೂ ಪರಿಷತ್ ಆಯೋಜಿಸಿದ್ದ ಘರ್ ವಾಪಸಿ ಕಾರ್ಯಕ್ರಮದಲ್ಲಿ ಧರ್ಮಪುರ ಮತ್ತು ಕಪ್ರದ ತಾಲೂಕುಗಳ 21 ಕುಟುಂಬಗಳು ಮತ್ತೆ ಮಾತೃಧರ್ಮಕ್ಕೆ ಮರಳಿವೆ. ಈ ಕುಟುಂಬಗಳು ಹಲವು ಆಮಿಷಗಳಿಗೆ ಬಲಿಯಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದವು. ಇದೀಗ ವಾಪಿಯ ಬಾಪಾ ಸೀತಾರಾಮ್ ಆಶ್ರಮದಲ್ಲಿ ಈ ಕುಟುಂಬಗಳು ಮತ್ತೆ ಹಿಂದೂ ಧರ್ಮಕ್ಕೆ ಮರಳಿವೆ ಎಂದು ಮೂಲಗಳು ತಿಳಿಸಿವೆ. ಆಮಿಷಕ್ಕೆ ತುತ್ತಾಗಿ ತಾವು ಮತಾಂತರವಾಗಿದ್ದಾಗಿ ಅವರು ಹೇಳಿದ್ದಾರೆ. ಐದು ವರ್ಷಗಳ ಬಳಿಕವೂ ನಮ್ಮ ಸಮಸ್ಯೆ ಜೀವಂತವಾಗಿಯೇ ಇದೆ ಎಂದು ಹೇಳಿದ್ದಾರೆ. ಇದಕ್ಕೆ ಪೂರಕ ಎಂಬಂತೆ ಉತ್ತರ ಪ್ರದೇಶದಲ್ಲಿಯೂ ಮತಾಂತರವಾಗಿದ್ದ ಮೂವರು ಯುವಕರು ಮರಳಿ ಹಿಂದೂ ಧರ್ಮಕ್ಕೆ ಬಂದಿದ್ದಾರೆ.



ಆಸ್ಟ್ರೇಲಿಯಾಕ್ಕೆ ಕಳ್ಳತನದ ಮೂಲಕ ಅಕ್ರಮವಾಗಿ ರಫ್ತಾಗಿದ್ದ 14 ಕಲಾಕೃತಿಗಳನ್ನು ಭಾರತಕ್ಕೆ ಮತ್ತೆ ಹಿಂದಿರುಗಿಸಲಿರುವುದಾಗಿ ಅಲ್ಲಿನ ನ್ಯಾಷನಲ್ ಗ್ಯಾಲರಿ ತಿಳಿಸಿದೆ. ಈ ಕಲಾಕೃತಿಗಳನ್ನು ಕ್ಯಾನ್‌ಬೆರಾ ಗ್ಯಾಲರಿಯು ಗುರುತಿಸಿದೆ. ಇದರಲ್ಲಿ ಶಿಲ್ಪಗಳು, ಛಾಯಾಚಿತ್ರಗಳು ಹಾಗೂ ಸ್ಕ್ರಾಲ್‌ಗಳು ಸೇರಿವೆ. ಇವುಗಳಲ್ಲಿ 12 ನೇ ಶತಮಾನದ ಪೂರ್ವದ ಕಲಾಕೃತಿಗಳು ಇದ್ದು, ಕೆಲವೇ ತಿಂಗಳಲ್ಲಿ ಇವನ್ನು ಭಾರತಕ್ಕೆ ಮರಳಿ ಹಸ್ತಾಂತರ ಮಾಡಲಾಗುತ್ತದೆ ಎಂದು ಆಸ್ಟ್ರೇಲಿಯಾ ಹೇಳಿದೆ. ಇದರಲ್ಲಿ 350 ಕೋಟಿ ರೂಪಾಯಿ ಬೆಲೆಬಾಳುವ ತಮಿಳುನಾಡಿನ ದೇವಾಲಯವೊಂದರಿಂದ ಕಳವು ಮಾಡಲಾದ ಶಿವನ ಮೂರ್ತಿಯೂ ಸೇರಿದೆ.

ದೇಶದ ವೈದ್ಯಕೀಯ ಕೋರ್ಸ್‌ಗಳಾದ ಎಂಬಿಬಿಎಸ್, ಎಂಡಿ, ಎಂಎಸ್, ಡಿಪ್ಲೊಮಾ, ಬಿಡಿಎಸ್, ಎಂಡಿಎಸ್ ಮೊದಲಾದ ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ 27% ಮೀಸಲಾತಿ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ 10% ಮೀಸಲಾತಿ ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

## ದಿನಗೂಲಿ ಕೆಲಸ ಮಾಡುತ್ತಿದ್ದ ಸೆಲ್ವಮರಿ ಈಗ ಹೈಸ್ಕೂಲ್ ಶಿಕ್ಷಕಿ



ದಿನಗೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ಕೇರಳದ ಇಡುಕ್ಕಿಯ ಸೆಲ್ವಮರಿ ಅವರು ಪ್ರೌಢಶಾಲೆಯ ಶಿಕ್ಷಕಿಯಾಗಿ ನೇಮಕವಾಗಿದ್ದು, ಅವರಿಗೆ ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ದೂರವಾಣಿ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಸೆಲ್ವಮರಿ ಹಲವು ವರ್ಷಗಳ ಕಾಲ ಕಷ್ಟಪಟ್ಟು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದರು. ಏಲಕ್ಕಿ ಎಸ್ಟೇಟ್‌ನಲ್ಲಿ ದಿನಗೂಲಿ ಮಾಡುತ್ತಿದ್ದ ಅವರು ಎಂಎಸ್ಸಿ, ಎಂಎಡ್, ಎಂಫಿಲ್‌ನಲ್ಲಿ ಮೊದಲ ರ‍್ಯಾಂಕ್ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ. ಇದೀಗ ಪಿಎಚ್‌ಡಿ ಸಹ ಮಾಡುತ್ತಿದ್ದಾರೆ. ಇವರ ಈ ಅಸಾಧಾರಣ ಸಾಧನೆಗೆ ರಾಜ್ಯಪಾಲರು ಖುದ್ದು ಕರೆ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ಮೀರಾಬಾಯ್ ಚಾನುಗೆ ರೈಲ್ವೆಯಲ್ಲಿ ಉದ್ಯೋಗ ಭಡ್ತಿ, 2 ಕೋಟಿ ಬಹುಮಾನ ಘೋಷಿಸಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್



ಒಲಿಂಪಿಕ್ಸ್‌ನಲ್ಲಿ ವೈಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗಳಿಸಿ ದೇಶದ ಹಿರಿಮೆಯನ್ನು ಹೆಚ್ಚಿಸಿದ ಕ್ರೀಡಾಪಟು ಮೀರಾಬಾಯ್ ಚಾನು ಅವರನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಸನ್ಮಾನಿಸಿ, ಅವರಿಗೆ ನಾರ್ತ್‌ಈಸ್ಟ್ ಫ್ರಾಂಟಿಯರ್ ರೈಲ್ವೆಯಲ್ಲಿ ಉದ್ಯೋಗ ಭಡ್ತಿ ನೀಡುವುದಾಗಿ ತಿಳಿಸಿದ್ದಾರೆ. ಹಾಗೆಯೇ 2 ಕೋಟಿ ರೂ. ಬಹುಮಾನವನ್ನು ಸಹ ಘೋಷಣೆ ಮಾಡಿದ್ದಾರೆ.

ಮಹಿಳಾ ವಿಭಾಗದ ಬಾಕ್ಸಿಂಗ್‌ನಲ್ಲಿ ಭಾರತದ ಲವ್ಲಿನಾ ಬೋರ್ಗೊಹೈನ್ ಕಂಚಿನ ಪದಕ ಗೆದ್ದು ದೇಶದ ಕೀರ್ತಿಯನ್ನು ಎತ್ತರಕ್ಕೇರಿಸಿದ್ದಾರೆ. ಲವ್ಲಿನಾ ಅವರು 0–5 ಅಂತರದಲ್ಲಿ ಬಾಕ್ಸಿಂಗ್ ಸೆಮಿಫೈನಲ್‌ನಲ್ಲಿ ಟರ್ಕಿಯ ಬುಸೆನಾಜ್ ಸುರ್ಮೆಲಿನ್ ಅವರು ಲವ್ಲಿನಾ ವಿರುದ್ಧ ಗೆಲುವು ಸಾಧಿಸಿದ್ದಾರೆ. ಆ ಮೂಲಕ ಲವ್ಲಿನಾ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಈ ಮಹತ್ವದ ನಿರ್ಣಯದಿಂದ ಪ್ರತಿ ವರ್ಷ ಎಂಬಿಬಿಎಸ್‌ನಲ್ಲಿ ಸುಮಾರು 1500 ಒಬಿಸಿ, 550 ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ, ಸ್ನಾತಕೋತ್ತರ ಪದವಿಯಲ್ಲಿ ಸುಮಾರು 2500 ವಿದ್ಯಾರ್ಥಿಗಳಿಗೆ, 1000 ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ಮಡಿಕೇರಿ ಸಮೀಪದ ಬೋಯಿಕೇರಿ ಬಳಿ ಇತ್ತೀಚೆಗೆ ರಜೆ ಕಳೆಯಲು ಊರಿಗೆ ಬಂದಿದ್ದ ಗಾಳಿಬೀಡು ಮೂಲದ ಯೋಧ ಸಂತೋಷ್ ಹಾಗೂ ಅವರ ಕುಟುಂಬದ ಮೇಲೆ ಕೆಲವು ಮುಸ್ಲಿಮರು ಹಲ್ಲೆ ನಡೆಸಿದ್ದಾರೆ. ಕುಶಾಲನಗರದಲ್ಲಿನ ಬಂಧುಗಳ ಮನೆಗೆ ಭೇಟಿ ನೀಡಿ ಮಡಿಕೇರಿಗೆ ಮರಳುತ್ತಿದ್ದ ಸಂದರ್ಭದಲ್ಲಿ ಕಾರು ಅಪಘಾತವನ್ನು ನೆಪ ಮಾಡಿಕೊಂಡು ಕೆಲವು ಮುಸ್ಲಿಮರು ಯೋಧ ಸಂತೋಷ್, ಪತ್ನಿ ಯೋಗಿತಾ, ತಂದೆ ಪೂವಪ್ಪ, ತಾಯಿ ರಾಧಾ ಹಾಗೂ ಸಹೋದರ ಅಶೋಕ್ ಮೇಲೆ ಹಲ್ಲೆ ನಡೆಸಿದ್ದಾರೆ. ಗಾಯಾಳುಗಳನ್ನು ಮಡಿಕೇರಿ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿ, ಚಿಕಿತ್ಸೆ ನೀಡಲಾಗಿದ್ದು ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದರೆ. ಪೊಲೀಸರು ಈ ಸಂಬಂಧ ಕೆಲವರನ್ನು ಬಂಧಿಸಿದ್ದು ವಿಚಾರಣೆ ನಡೆಯುತ್ತಿದೆ. ಹಿಂದೂ ಜಾಗರಣ ವೇದಿಕೆ ಹಮ್ಮಿಕೊಂಡ ಪ್ರತಿಭಟನಾ ಸಭೆಯಲ್ಲಿ ನೂರಾರು ಜನ ಭಾಗವಹಿಸಿ, ಆರೋಪಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

## ಸಾಲುದ್ದದ ಸುದ್ದಿಗಳು



ಜಪಾನ್‌ನಲ್ಲಿ ನಡೆಯುತ್ತಿರುವ ಟೊಕಿಯೋ ಒಲಿಂಪಿಕ್ಸ್ 2020 ರಲ್ಲಿ ಬ್ಯಾಡ್ಮಿಂಟನ್‌ನ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪಿ. ವಿ. ಸಿಂಧು ಕಂಚಿನ ಪದಕ ವಿಜೇತರಾಗಿದ್ದಾರೆ. ಚೀನಾದ ಹೀ ಬಿಂಗ್ಜಿಯಾವೊ ವಿರುದ್ಧ 21–13, 21–15 ನೇರ ಸೆಟ್‌ಗಳಿಂದ ಕಂಚಿನ ಪದಕದ ಪಂದ್ಯದಲ್ಲಿ ಸಿಂಧು ವಿಜಯಶಾಲಿಯಾಗಿದ್ದಾರೆ.



ಸ್ವದೇಶಿ ಮೊದಲ ವಿಮಾನ ವಾಹಕ ಯುದ್ಧನೌಕೆ (ಐಎಸಿ) ವಿಕ್ರಾಂತ್ ಸಮುದ್ರದಲ್ಲಿ ತನ್ನ ಪ್ರಥಮ ಪ್ರಯೋಗಾರ್ಥ ಸಂಚಾರ ಆರಂಭ ಮಾಡಿದೆ. ಈ ಅತ್ಯಾಧುನಿಕ ವಿಮಾನವಾಹಕ ಯುದ್ಧನೌಕೆಯು ದೇಶೀಯವಾಗಿ ವಿನ್ಯಾಸಗೊಳಿಸಿ, ನಿರ್ಮಿಸಲಾಗಿದೆ. ಕಳೆದ 50 ವರ್ಷಗಳ ಹಿಂದೆ ಈ ಮೊದಲಿನ ಇದೇ ಹೆಸರಿನ ಯುದ್ಧ ನೌಕೆ ಭಾರತದ ಗೆಲುವಿನಲ್ಲಿಯೂ ಮಹತ್ವದ ಪಾತ್ರ ವಹಿಸಿತ್ತು. ಪ್ರಸ್ತುತ ಪ್ರಯೋಗಾರ್ಥ ಸಂಚಾರ ಆರಂಭಿಸಿರುವ ಈ ನೌಕೆ ಮುಂದಿನ ವರ್ಷದಲ್ಲಿ ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಲಿದೆ. ಈ ನೌಕೆಯನ್ನು ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತದ ಭಾಗವಾಗಿ ನಿರ್ಮಾಣ ಮಾಡಲಾಗಿದೆ ಎಂದು ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಭಾರತದ ಸಿಂಧು ಸರಸ್ವತಿ ನಾಗರಿಕತೆಯ ಕಾಲದ ನಗರವಾಗಿದ್ದ ಧೋಲವೀರ ಹಾಗೂ ತೆಲಂಗಾಣದ ಐತಿಹಾಸಿಕ ರಾಮಪ್ಪ ದೇವಸ್ಥಾನಗಳು ಸೇರಿವೆ. ಗುಜರಾತಿನಲ್ಲಿರುವ ಈ ಧೋಲವೀರ ನಗರವು 1968 ರಲ್ಲಿ ಪತ್ತೆಯಾಗಿದ್ದು ವಿಶೇಷ ಕಲ್ಲಿನ ರಚನೆಗಳಿಂದ ಪ್ರಸಿದ್ಧಿ





ಪಡೆದಿದೆ. ಅತ್ಯುತ್ತಮ ಶಿಲ್ಪಕಲೆಗಳಿಂದ ವಿಶ್ವ ಮನ್ನಣೆ ಗಳಿಸಿರುವ ಈ ದೇಗುಲವನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಗುರುತಿಸಿದೆ. ಚೀನಾದಲ್ಲಿ ನಡೆದ ವಿಶ್ವ ಪರಂಪರೆ ಸಮಿತಿಯ ಸಭೆಯಲ್ಲಿ ಈ ನಿರ್ಣಯವನ್ನು ಯುನೆಸ್ಕೋ ಪ್ರಕಟಿಸಿದೆ. 12 ನೇ ಶತಮಾನದ ಕಾಕತೀಯರ ವಾಸ್ತುಶಿಲ್ಪದ ಅದ್ಭುತವನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರ್ಪಡೆಯಾಗುತ್ತಿರುವ ಈ ದೇವಾಲಯವು ಭಾರತದ ಕಿರೀಟಕ್ಕೆ ಸೇರಿದ ಮತ್ತೊಂದು ಗರಿಯಾಗಿದೆ.

ರೈತರ ಜಮೀನಿನ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ, ರಾಷ್ಟ್ರಮಟ್ಟದ ಡೇಟಾಬೇಸ್ ರಚಿಸುವ ಕೆಲಸವಣ್ಣೆ ದೇಂದ್ರ ಕೃಷಿ ಸಚಿವಾಲಯ ಕೈಗೆತ್ತಿಕೊಂಡಿದೆ. ಇದರಿಂದ ಕೃಷಿ ಯೋಜನೆಗಳ ಯೋಜನೆ ಸುಲಭವಾಗುವುದಲ್ಲದೆ, ರೈತರಿಗೆ ನೆರವು ನೀಡುವುದು ಕೂಡಾ ಸುಲಭವಾಗುತ್ತದೆ. ಕೃಷಿ ವ್ಯವಸ್ಥೆ ಸುಧಾರಿಸಿ ಕೃಷಿಕರ ಆದಾಯ ಹೆಚ್ಚಿಸುವ ಉದ್ದೇಶ ಹೊಂದಿರುವ 'ಅಗ್ರಿಸ್ಟಾಕ್' ಎಂಬ ಹೆಸರಿನ ಈ ಯೋಜನೆ ಈಗಾಗಲೇ ಆರಂಭವಾಗಿದ್ದು ಪ್ರಾಯೋಗಿಕವಾಗಿ ಇದನ್ನು ಸಿದ್ಧಪಡಿಸಿ ಪರೀಕ್ಷಿಸಲು ಸ್ಟಾರ್ಟ್ ಅಪ್ ಕಂಪನಿಗಳ ನೆರವು ತೆಗೆದುಕೊಳ್ಳಲಾಗುತ್ತಿದೆ ಎಂದು ಕೃಷಿ ಸಚಿವಾಲಯ ತಿಳಿಸಿದೆ.

2020–21 ರಲ್ಲಿ ದೇಶಾದ್ಯಂತ ಖಾದಿ ಮಾರಾಟದಲ್ಲಿ ಗಣನೀಯ ಹೆಚ್ಚಳವಾಗಿದ್ದು 95,741 ಕೋಟಿ ರೂಪಾಯಿಗಳನ್ನು ಮುಟ್ಟಿದೆ. ಪ್ರಧಾನಿ ನರೇಂದ್ರ ಮೋದಿಯವರು ಮನ್ ಕೀ ಬಾತ್ ಮೂಲಕ ಹಾಗೂ ವೋಕಲ್ ಫಾರ್ ಲೋಕಲ್ ಕಲ್ಪನೆಯನ್ನು ಜನರ ಮುಂದಿಡುವ ಮೂಲಕ ಖಾದಿ ಬಳಕೆ ಹೆಚ್ಚಿಸಲು ಕರೆ ನೀಡುತ್ತಿದ್ದು, ಇದರ ಪರಿಣಾಮವಾಗಿ ಇತ್ತೀಚೆಗೆ ಜನರು ಖಾದಿಯತ್ತ ಒಲವು ತೋರುತ್ತಿರುವುದು ಗ್ರಾಮೀಣ ಉದ್ಯೋಗಸೃಷ್ಟಿಯ ದೃಷ್ಟಿಯಿಂದ ಒಂದು ಉತ್ತಮ ಬೆಳವಣಿಗೆ.

## ಭಾರತದಲ್ಲಿ ಸೆಪ್ಟೆಂಬರ್‌ನಲ್ಲಿ ಕೊರ್ಬೋವ್ಯಾಕ್ಸ್ ಕೊರೋನಾ ಲಸಿಕೆ ಬಿಡುಗಡೆ

ಭಾರತದ ಬಯೋಲಾಜಿಕಲ್–ಇ ಸಂಸ್ಥೆಯ ಕೊರ್ಬೋವ್ಯಾಕ್ಸ್ ಎಂಬ ಲಸಿಕೆ ಸೆಪ್ಟೆಂಬರ್‌ನಲ್ಲಿ ಬಳಕೆಗೆ ಬರಲಿದೆ. ಈ ಸಂಸ್ಥೆ ಹೈದರಾಬಾದ್ ಮೂಲದ್ದಾಗಿದ್ದು ಸೆಪ್ಟೆಂಬರ್‌ನಲ್ಲಿ ತಾನು ಸಿದ್ಧಪಡಿಸಿದ ಕೊರ್ಬೋವಾಕ್ಸ್ ಅನ್ನು ಭಾರತದಲ್ಲಿ ಬಿಡುಗಡೆ ಮಾಡುವುದಾಗಿ ತಿಳಿಸಿದೆ. ಇದನ್ನು ಈಗಾಗಲೇ 1 ಮತ್ತು 2 ನೇ ಹಂತದ ಕ್ಲಿನಿಕಲ್ ಟ್ರಯಲ್ ಗಳಿಗೆ ಒಳಪಡಿಸಲಾಗಿದ್ದು, ಇದು ಸಕಾರಾತ್ಮಕ ಫಲಿತಾಂಶ ನೀಡಿದೆ ಎಂದು ಸಂಸ್ಥೆ ಹೇಳಿದೆ. ಇದೀಗ ಈ ಲಸಿಕೆಯ ಮೂರನೇ ಹಂತದ ಕ್ಲಿನಿಕಲ್ ಪ್ರಯೋಗಗಳು ನಡೆಯುತ್ತಿವೆ.



Date of Publication 10 AUGUST 2021

REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2021-2023 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-08-2021

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಸ್ವಾತಂತ್ರ್ಯ ದೊರಕಿ 75 ವರ್ಷಗಳ ಸಂದರ್ಭದಲ್ಲಿ ಕಾರ್ಗಿಲ್‌ನ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ




ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ಕಾರ್ಗಿಲ್‌ನ ಆರ್ಯನ್ ಕಣಿವೆಯ ಹಳ್ಳಿಗಳಿಗೆ ಪವರ್‌ಗ್ರಿಡ್‌ನಿಂದ ವಿದ್ಯುತ್ ಸಂಪರ್ಕ ತಲುಪುವಂತಾಗಿದೆ. ಇದುವರೆಗೆ ಈ ಹಳ್ಳಿಗಳಿಗೆ ಡಿಸೇಲ್ ಜನರೇಟರ್ ಮೂಲಕ ಸಂಜೆಯ ವೇಳೆಯಲ್ಲಿ 5–6 ಗಂಟೆಗಳ ಅವಧಿಗೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿತ್ತು. ಆದರೆ ಇದೀಗ ಗ್ರಾಮೀಣ ವಿದ್ಯುದೀಕರಣ ಹಿನ್ನೆಲೆಯಲ್ಲಿ 24×7 ವಿದ್ಯುತ್ ಸಂಪರ್ಕ ಒದಗಿಸಲು ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ನಿರಂತರ ವಿದ್ಯುತ್ ಸಂಪರ್ಕದಿಂದ ಜನರ ಜೀವನ ಮಟ್ಟ ಸುಧಾರಣೆಯಾಗುವ ಜೊತೆಗೆ ಪ್ರವಾಸೋದ್ಯಮಕ್ಕೂ ಇದು ಉತ್ತೇಜನ ನೀಡಲಿದೆ.

ಪ್ರಧಾನಿ ಮೋದಿ ಸರ್ಕಾರ ಲಡಾಖಿನ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಪವರ್ ಗ್ರಿಡ್ ಜೊತೆಗೆ ಸಂಪರ್ಕ ಸಾಧಿಸುವುದಕ್ಕೆ ಅನುಕೂಲವಾಗುವಂತೆ 1309.71 ಕೋಟಿ ರೂ.ಗಳ ಯೋಜನೆಗೆ ಅನುಮೋದಿಸಿತ್ತು. ಇದೀಗ ವಿದ್ಯುತ್ ಸಂಪರ್ಕ ಸಹ ದೊರೆಯುತ್ತಿದ್ದು ಭಾರತೀಯ ಸೇನೆ ಮತ್ತು ಜನಸಾಮಾನ್ಯರಿಗೆ ಇಪ್ಪತ್ತನಾಲ್ಕು ಗಂಟೆಗಳ ವರೆಗು ವಿದ್ಯುತ್ ಪೂರೈಕೆ ಮಾಡಲಿದೆ. ಇದರಿಂದ ಮುಂದೆ ಸ್ಥಾಪನೆಯಾಗಲಿರುವ ಸೌರ ವಿದ್ಯುತ್ ಯೋಜನೆಯ ವಿದ್ಯುತ್ ಅನ್ನು ಇತರ ಭಾಗಗಳಿಗೆ ಸಾಗಿಸಲೂ ಅನುಕೂಲವಾಗಲಿದೆ.

## ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಗೆ ಪ್ರಧಾನಿ ಮೋದಿ ಅಧ್ಯಕ್ಷತೆ

Security Council
United Nations

ಆಗಸ್ಟ್ 9 ರಂದು ನಡೆಯಲಿರುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮೊದಲ ಸಭೆಯ ಅಧ್ಯಕ್ಷತೆಯನ್ನು ಪ್ರಧಾನಿ ಮೋದಿ ವಹಿಸಲಿದ್ದಾರೆ ಎಂದು ಭಾರತದ ಶಾಶ್ವತ ಪ್ರತಿನಿಧಿ ಸಯ್ಯದ್ ಅಕ್ಬರುದ್ದೀನ್ ಹೇಳಿದ್ದಾರೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಇದೇ ಮೊದಲ ಬಾರಿಗೆ ಭಾರತದ ಪ್ರಧಾನಿಯೋರ್ವರು ವಹಿಸಿಕೊಳ್ಳುತ್ತಿದ್ದಾರೆ. ಇದು ದೇಶದ ನಾಯಕತ್ವ ಗಟ್ಟಿಯಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಅವರು ಹೇಳಿದ್ದಾರೆ.

ಈ ಸಭೆಯಲ್ಲಿ ಭಾರತ ಕರಾವಳಿ ಭದ್ರತೆ, ಭಯೋತ್ಪಾದನೆ ನಿಗ್ರಹ, ಶಾಂತಿಪಾಲನೆ ಎಂಬ ಮೂರು ಮುಖ್ಯ ವಿಚಾರಗಳಿಗೆ ಸಂಬಂಧಿಸಿದಂತೆ ತನ್ನ ನಿಲುವು ಮಂಡಿಸಲಿದೆ. ಈ ಸಭೆಯಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಮೊದಲಾದವರು ಭಾಗವಹಿಸಲಿದ್ದಾರೆ.

## ಡಿಜಿಟಲ್ ಪಾವತಿ ವ್ಯವಸ್ಥೆ 'ಇ–ರುಪಿ'ಗೆ ಪ್ರಧಾನಿ ಮೋದಿ ಚಾಲನೆ

ದೇಶದಲ್ಲಿ ಡಿಜಿಟಲ್ ಪಾವತಿಗೆ ಉತ್ತೇಜನ ನೀಡುವ ಮತ್ತು ಅದನ್ನು ಸರಳಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಅಭಿವೃದ್ಧಿ ಮಾಡಿರುವ ಹೊಸ ವ್ಯವಸ್ಥೆ 'ಇ ರುಪಿ'ಗೆ ಪ್ರಧಾನಿ ಮೋದಿ ಅವರು ಚಾಲನೆ ನೀಡಿದ್ದಾರೆ. ನಗದುರಹಿತ, ಸಂಪರ್ಕರಹಿತ ಡಿಜಿಟಲ್ ಪಾವತಿಯು ವ್ಯಾಪಾರಿಗಳು ಹಾಗು ಗ್ರಾಹಕರನ್ನು ಡಿಜಿಟಲ್ ರೂಪದಲ್ಲಿ ಸಂಪರ್ಕಿಸಲು, ವಿವಿಧ ಸರ್ಕಾರಿ ಸೇವೆಗಳನ್ನು ಸೋರಿಕೆರಹಿತವಾಗಿ ಫಲಾನುಭವಿಗಳಿಗೆ ತಲುಪಿಸಲು ಈ ವ್ಯವಸ್ಥೆ ಪ್ರಯೋಜನಕಾರಿಯಾಗಲಿದೆ.

e₹UPI
PREPAID e-VOUCHER
पूरी तरह नगदरहित व संपर्करहित भुगतान
© CRIDA.IN

ಈ ವ್ಯವಸ್ಥೆಯು ನೇರ ನಗದು ವರ್ಗಾವಣೆ ಯೋಜನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಇ–ರುಪಿಯು ಕ್ಯುಆರ್ ಕೋಡ್ ಅಥವಾ ಎಸ್‌ಎಂಎಸ್ ಆಧಾರಿತ ಇ–ವೋಚರ್ ರೂಪದಲ್ಲಿ ಲಭ್ಯವಾಗಲಿದ್ದು ಇದನ್ನು ಫಲಾನುಭವಿಗಳ ಮೊಬೈಲ್‌ಗೆ ಕಳುಹಿಸಲಾಗುತ್ತದೆ. ಬಳಕೆದಾರರು ತಮ್ಮ ಕಾರ್ಡ್, ಡಿಜಿಟಲ್ ಪಾವತಿ ಮೊಬೈಲ್ ಅಪ್ಲಿಕೇಶನ್ ಅಥವಾ ಇಂಟರ್ನೆಟ್ ಬ್ಯಾಂಕಿಗ್ ಬಳಸದೆಯೇ, ಈ ವೋಚರನ್ನು ಬಳಸಬಹುದು.

## ಪ್ರತಿ ತಿಂಗಳು ದೇಶಕ್ಕೆ 11 ರಿಂದ 12 ಕೋಟಿ ಡೋಸ್ ಕೋವಿಶೀಲ್ಡ್ ಲಸಿಕೆ ಲಭ್ಯ

ಪುಣೆಯ ಸೆರಂ ಇನ್ಸ್ಟಿಟ್ಯೂಟ್ ಪ್ರತಿ ತಿಂಗಳು ದೇಶಕ್ಕೆ 11 ರಿಂದ 12 ಕೋಟಿ ಡೋಸ್ ಕೋವಿಶೀಲ್ಡ್ ಲಸಿಕೆ ಒದಗಿಸಲಿದೆ ಎಂದು ಕೇಂದ್ರ ಸಚಿವ ಮನ್ಸೂಖ್ ಮಾಂಡವಿಯಾ ಹೇಳಿದ್ದಾರೆ. ಆಗಸ್ಟ್ ತಿಂಗಳಲ್ಲಿ ಭಾರತ್ ಬಯೋಟೆಕ್ 3.5 ಕೋಟಿ ಡೋಸ್ ಕೋವ್ಯಾಕ್ಸಿನ್ ಲಸಿಕೆಯನ್ನು ಪೂರೈಸಲಿದೆ. ಕೊರೋನಾ ವೈರಸ್ ವಿರುದ್ಧದ ಡಿಎನ್‌ಎ ಆಧರಿತ ಲಸಿಕೆ ತುರ್ತು ಬಳಕೆಗಾಗಿ ಜೈಡಸ್ ಕ್ಯಾಡಿಲಾ ಅರ್ಜಿ ಸಲ್ಲಿಸಿದೆ. ಹಾಗೆಯೇ ಭಾರತ್ ಬಯೋಟೆಕ್ ಮತ್ತು ಜೈಡಸ್ ಕ್ಯಾಡಿಲಾಗಳು ಮಕ್ಕಳ ಮೇಲಿನ ಕೊರೋನಾ ಲಸಿಕೆಯ ಪ್ರಾಯೋಗಿಕ ಪರೀಕ್ಷೆ ನಡೆಸಿವೆ ಎಂದು ಮಾಂಡವಿಯಾ ಹೇಳಿದ್ದಾರೆ.

## ದಂತೇವಾಡದಲ್ಲಿ ಪೊಲೀಸರೆದುರು ಶರಣಾದ 11 ಮಂದಿ ಮಾವೋವಾದಿಗಳು

ಛತ್ತೀಸ್‌ಘಡದ ಮಲಂಗಿರಿ ಪ್ರದೇಶದಲ್ಲಿ ಗುಪ್ತ ಕಾರ್ಯಾಚರಣೆ ನಡೆಸುತ್ತಿದ್ದ ಮಹಿಳಾ ನಕ್ಸಲ್ ರಂಬತಿ ಬಾರ್ಸೇ ಸೇರಿದಂತೆ ಒಟ್ಟು 11 ಮಾವೋವಾದಿಗಳು ಪೊಲೀಸರಿಗೆ ಶರಣಾಗಿದ್ದಾರೆ. ಶರಣಾಗತರಾದ ಮಾವೋವಾದಿಗಳ ತಲೆಗೆ ಒಂದು ಲಕ್ಷ ರೂ. ಬಹುಮಾನ ಘೋಷಣೆಯಾಗಿತ್ತು. ಬಂಧಿತರು 2013 ರ ಚುನಾವಣಾ ಸಂದರ್ಭದಲ್ಲಿ ಎಲೆಕ್ಟ್ರಾನಿಕ್ ಮತಯಂತ್ರ ದೋಚುವುದು, ಪೊಲೀಸರ ಮೇಲೆ ಗುಂಡು ಹಾರಿಸುವುದು, ವಾಹನಗಳಿಗೆ ಬೆಂಕಿ ಹಚ್ಚುವುದು ಸೇರಿದಂತೆ ಹಲವು ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ಇತ್ತೀಚೆಗಷ್ಟೇ ನಾಲ್ವರು ನಕ್ಸಲರು ದಂತೇವಾಡದಲ್ಲಿ ಪೊಲೀಸರಿಗೆ ಶರಣಾಗಿದ್ದರು. ಇವರಲ್ಲಿ ಓರ್ವ ಮಹಿಳೆಯೂ ಸೇರಿದ್ದು, 2015 ರಲ್ಲಿ ಚೋಲ್ನಾರ್ ಸೇತುವೆಯನ್ನು ನೆಲಸಮಗೊಳಿಸುವಲ್ಲಿ ಇವರ ಪಾತ್ರವಿತ್ತು ಎಂದು ಮೂಲಗಳು ಹೇಳಿವೆ. ಹಾಗೆಯೇ ಭದ್ರತಾ ಪಡೆಗಳ ವಾಹನ ಹಾಳುಗೆಡವಿದ ಆರೋಪವೂ ಇವರ ಮೇಲಿದೆ. ಈ ಕಾರ್ಯಾಚರಣೆ ಸಂದರ್ಭದಲ್ಲಿ ಏಳು ಮಂದಿ ಯೋಧರು ಹುತಾತ್ಮರಾಗಿದ್ದರು ಎಂದು ಮೂಲಗಳು ಹೇಳಿವೆ.

ಸದ್ಯ ಪೊಲೀಸರಿಗೆ ಶರಣಾಗಿರುವ ಮಾವೋವಾದಿಗಳು ತಮ್ಮ ಕುಕೃತ್ಯಗಳಿಂದ ಬೇಸತ್ತು, ಬದಲಾಗಿ ಸಮಾಜದ ಮುಖ್ಯ ವಾಹಿನಿಗೆ ಬರುವುದಾಗಿ ತಿಳಿಸಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಇತ್ತೀಚೆಗೆ ಗಣನೀಯ ಪ್ರಮಾಣದಲ್ಲಿ ಮಾವೋವಾದಿಗಳು ಪೊಲೀಸರ ಮುಂದೆ ಶರಣಾಗುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ.

## ಎಲೆಕ್ಟ್ರಿಕ್ ವಾಹನ ಕ್ಷೇತ್ರದಲ್ಲಿ 25 ಸಾವಿರ ಕೋಟಿ ಹೂಡಿಕೆ ಸೆಳೆದ ಭಾರತ



2021 ರ ಈ ಏಳು ತಿಂಗಳಲ್ಲಿಯೇ ಎಲೆಕ್ಟ್ರಿಕ್ ವೆಹಿಕಲ್ಸ್ ಮತ್ತು ಎಲೆಕ್ಟ್ರಿಕ್ ಮೊಬಿಲಿಟಿ ಸ್ಪೇಸ್‌ಗಳ ವಹಿವಾಟಿನಲ್ಲಿ ಭಾರತ ಮಹತ್ವದ ಗುರಿ ಸಾಧಿಸಿದೆ. ಎಲೆಕ್ಟ್ರಿಕ್ ವೆಹಿಕಲ್ ತಯಾರಕರು, ಬಿಡಿಭಾಗಗಳ ತಯಾರಕರು, ವಿತರಣಾ ಸಂಸ್ಥೆಗಳು ಜನವರಿಯಿಂದ ಜುಲೈವರೆಗಿನ ತಿಂಗಳಲ್ಲಿ25,045 ಕೋಟಿ ರೂ. ಗಳಷ್ಟು ಹೂಡಿಕೆ ಮಾಡಿವೆ ಎಂದು ಮೂಲಗಳು ತಿಳಿಸಿವೆ. ನವದೆಹಲಿ ಮೂಲದ ಇ–ಮೊಬಿಲಿಟಿ ಸ್ಟಾರ್ಟಪ್ ಓಯೆ ರಿಕ್ಷಾ 3700 ಕೋಟಿ ರೂ. ಗಳನ್ನು ಹೂಡಿಕೆ ಮಾಡಿದೆ. ಇದು ಒಟ್ಟು ಹೂಡಿಕೆಯ 15% ಗಳಷ್ಟಾಗಿದೆ. ಒಮೆಗಾ ಸಿಕಿ 9% ಹೂಡಿಕೆ ಮಾಡಿದೆ. ಅಶೋಕ್ ಲೇ ಲ್ಯಾಂಡ್‌ನ ಎಲೆಕ್ಟ್ರಿಕ್ ವೆಹಿಕಲ್ ಅಂಗಸಂಸ್ಥೆ ಸ್ವಿಚ್ ಮೊಬಿಲಿಟಿ 1485 ಕೋಟಿ ರೂ. ಹೂಡಿಕೆ ಮಾಡಿದೆ. ಮಹೀಂದ್ರಾ ಮತ್ತು ಮಹೀಂದ್ರಾ ಸಂಸ್ಥೆ 17000 ಕೋಟಿ ರೂ., 3000 ಕೋಟಿ ರೂ. ಗಳನ್ನು ಹೂಡಿಕೆ ಮಾಡಿದೆ. ಹಾಗೆಯೇ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಕ್ಕಾಗಿ 500 ಕೋಟಿ ರೂ. ಗಳನ್ನು ಹೂಡಿಕೆ ಮಾಡಿದೆ. ಜೊತೆಗೆ ದಕ್ಷಿಣ ಕೊರಿಯಾದ ಹುಂಡೈ ಫೆಬ್ರವರಿಯಲ್ಲಿ 3200 ಕೋಟಿ ರೂ., ಜುಲೈನಲ್ಲಿ 743.31 ಕೋಟಿ ರೂ. ಗಳ ಹೆಚ್ಚುವರಿ ಹೂಡಿಕೆಯನ್ನು ಸಹ ಘೋಷಿಸಿದೆ.

## ಕಲ್ಲುತೂರಾಟ ಮಾಡಿದರೆ ಸರ್ಕಾರಿ ಉದ್ಯೋಗ ನಿರಾಕರಿಸಿ ಆದೇಶ ಹೊರಡಿಸಿದ ಜಮ್ಮು ಕಾಶ್ಮೀರ

ಕಲ್ಲುತೂರಾಟ ಮೊದಲಾದ ದೇಶದ್ರೋಹಿ ಕೃತ್ಯಗಳಲ್ಲಿ ಭಾಗಿಯಾದವರಿಗೆ ಸರ್ಕಾರಿ ಉದ್ಯೋಗ ನಿರಾಕರಿಸಿ ಆದೇಶವೊಂದನ್ನು ಜಮ್ಮು ಕಾಶ್ಮೀರ ಜಾರಿಗೊಳಿಸಿದೆ. ಇದರನ್ವಯ ಕಾನೂನು ಸುವ್ಯವಸ್ಥೆ ಹದಗೆಡಿಸಿದ ಹಿನ್ನೆಲೆ ಹೊಂದಿದವರಿಗೆ ಪಾಸ್‌ಪೋರ್ಟ್ ಕೊಡಲು ಅನುಮತಿ ನೀಡದಿರಲು ಹಾಗೂ ಸರ್ಕಾರಿ ಉದ್ಯೋಗ ನೀಡದಿರಲು ಸರ್ಕಾರ ನಿರ್ಧರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಾಜ್ಯದಲ್ಲಿ ಸರ್ಕಾರಿ ಉದ್ಯೋಗ ಪಡೆಯಲು ಸಿಐಡಿಯಿಂದ ತಮ್ಮ ಚಾರಿತ್ರ್ಯ ತೃಪ್ತಿಕರವಾಗಿದೆ ಎಂಬ ವರದಿ ಹೊಂದುವುದು ಕಡ್ಡಾಯವಾಗಿದೆ. ಹಾಗೆಯೇ ವ್ಯಕ್ತಿಯೊಬ್ಬ ತನ್ನ ಕುಟುಂಬದ ಸದಸ್ಯರ ಹಿನ್ನೆಲೆ, ಅವರು ರಾಜಕಾರಣದಲ್ಲಿ ತೊಡಗಿದ್ದಾರೆಯೇ, ವಿದೇಶಿ ಸಂಘ ಸಂಸ್ಥೆಗಳ ಜೊತೆಗೆ ಸಂಬಂಧ ಹೊಂದಿದ್ದಾರೆಯೇ, ನಿಷೇಧಿತ ಸಂಘಟನೆಗಳ ಜೊತೆಗೆ ಸಂಪರ್ಕ ಉಳ್ಳವರೇ ಎಂಬುದನ್ನು ಸಹ ಬಹಿರಂಗ ಮಾಡಬೇಕಾದ ಅಗತ್ಯ ಇದೆ ಎಂದು ಸರ್ಕಾರ ತಿಳಿಸಿದೆ. ರಾಜ್ಯದಲ್ಲಿ 370 ವಿಧಿ ರದ್ದು ಮಾಡಿದಾಗಿನಿಂದ ಜಮ್ಮು ಕಾಶ್ಮೀರ ಧನಾತ್ಮಕ ಬದಲಾವಣೆಗಳಿಗೆ ತೆರೆದುಕೊಳ್ಳುತ್ತಿದೆ.

## ಸರ್ಕಾರಿ ಉದ್ಯೋಗದಲ್ಲಿ ತೃತೀಯ ಲಿಂಗಿಗಳಿಗೆ 1% ಮೀಸಲಾತಿ ನೀಡಿದ ಮೊದಲ ರಾಜ್ಯ ಕರ್ನಾಟಕ

ಸರ್ಕಾರಿ ನೌಕರಿಯಲ್ಲಿ ಮಂಗಳಮುಖಿಯರಿಗೆ 1% ಮೀಸಲಾತಿ ಕಲ್ಪಿಸಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಭಾಜನವಾಗಿದೆ. ಈ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ. ಸರ್ಕಾರಿ ಉದ್ಯೋಗಕ್ಕೆ ಅರ್ಜಿ ಆಹ್ವಾನಿಸಿದಾಗಲೆಲ್ಲಾ, ಅದರ ಅಧಿಸೂಚನೆಯಲ್ಲಿ ಪುರುಷರು, ಸ್ತ್ರೀಯರು ಎಂಬ ಕಾಲಂ ಜೊತೆಗೆ ತೃತೀಯ ಲಿಂಗಿಗಳಿಗೆ ಒಂದು ಕಾಲಂ ಮೀಸಲಿಡುವುದಾಗಿ ಸರ್ಕಾರ ತಿಳಿಸಿದೆ. ತೃತೀಯ ಲಿಂಗಿಗಳಿಗೆ ಯಾವುದೇ ರೀತಿಯ ತಾರತಮ್ಯವಾಗದಂತೆ ಎಲ್ಲಾ ರೀತಿಯ ಕ್ರಮ ಕೈಗೊಳ್ಳುವುದಾಗಿಯೂ ಹೈಕೋರ್ಟ್‌ಗೆ ರಾಜ್ಯ ಸರ್ಕಾರ ತಿಳಿಸಿದೆ. ಹೈಕೋರ್ಟ್ ರಾಜ್ಯ ಸರ್ಕಾರದ ಈ ಮಹತ್ತ್ವದ ಕ್ರಮಕ್ಕೆ ಶ್ಲಾಘನೆ ವ್ಯಕ್ತಪಡಿಸಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.